KARNATAKA NURSING & PARAMEDICAL SCIENCES EDUCATION (REGULATION) AUTHORITY
ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ, ಬೆಂಗಳೂರು
KARNATAKA STATE DIPLOMA IN NURSING EXAMINATION BOARD, Bengaluru
1st Floor, Library Block BMCRI Campus K R Road, Bengaluru-02, Ph: 080-26700074, 26700075
Email:ksdneb@gmail.com, Web: www.ksdneb.org

KSDNEB/Est/ 14 /2022-23 Date: 30-09-2022

## 2022-23 ನೇ ಸಾಲಿನ ಡಿಪ್ಲೋಮಾ ಇನ್ ನರ್ಸಿಂಗ್ ಅಂಡ್ ಮಿಡ್‌ವೈಫರಿ ಕೋರ್ಸ್‌ನ ಪ್ರವೇಶಕ್ಕಾಗಿ ಆನ್‌ಲೈನ್‌ನಲ್ಲಿ ಕೌನ್ಸಿಲಿಂಗ್ ಇಚ್ಛೆ (Options) ಗಳನ್ನು ನಮೂದಿಸುವ ಬಗ್ಗೆ ಪ್ರಮುಖ ಸೂಚನೆಗಳು ಹಾಗೂ ಮಾರ್ಗಸೂಚಿಗಳು

ಡಿಪ್ಲೋಮಾ ಇನ್ ನರ್ಸಿಂಗ್ ಅಂಡ್ ಮಿಡ್‌ವೈಫರಿ ಕೋರ್ಸ್‌ನ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳು ಮಂಡಳಿಯು ಹೊರಡಿಸಿರುವ ಅಧಿಸೂಚನೆ ಹಾಗೂ ಡಿಪ್ಲೋಮಾ ಕೋರ್ಸ್‌ನ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸರಿಯಾಗಿ ತಿಳಿದುಕೊಳ್ಳುವುದು.

1) ಅ. ಅಭ್ಯರ್ಥಿಗಳ ಮೊಬೈಲ್‌ಗೆ SMS ಮುಖಾಂತರ ಮಾಹಿತಿಗಳನ್ನು ಕಳುಹಿಸಲಾಗುವುದು.

ಆ. ಮಂಡಳಿಯು ಕಳುಹಿಸುವ ಸಂದೇಶಗಳು ಕೆಲವು ಅಭ್ಯರ್ಥಿಗಳು ನೀಡಿರುವ ಮೊಬೈಲ್ ನಂಬರ್‌ಗಳು ತಪ್ಪಾಗಿದ್ದು, ತಲುಪದೇ ಇದ್ದಲ್ಲಿ ಅಭ್ಯರ್ಥಿಗಳು/ಪೋಷಕರುಗಳೇ ಹೊಣೆಯಾಗಿರುತ್ತಾರೆ.

2) ಅಭ್ಯರ್ಥಿಗಳು ಇಚ್ಛೆ (Option) ಗಳನ್ನು ಸಲ್ಲಿಸಿದ ಮಾತ್ರಕ್ಕೆ ಸೀಟಿನ ಆಯ್ಕೆಯಾಗಿದೆ ಎಂದು ಅರ್ಥವಲ್ಲ. ಮಂಡಳಿಯು ಅಭ್ಯರ್ಥಿಗಳ ರ‍್ಯಾಂಕ್, ಕ್ಯಾಟೆಗರಿ ಮತ್ತು ಸಲ್ಲಿಸಿರುವ ಶಾಲೆಗಳ ಆದ್ಯತೆಗಳ ಮೇಲೆ ಸೀಟುಗಳನ್ನು ಹಂಚಿಕೆ ಮಾಡಲಾಗುತ್ತದೆ. ಆದ್ದರಿಂದ ಆನ್‌ಲೈನ್‌ನಲ್ಲಿ ಅಭ್ಯರ್ಥಿಗಳು ತಮ್ಮ ಇಚ್ಛೆ (Option) ಗಳನ್ನು ನಮೂದಿಸುವಾಗ ಜಾಗರೂಕತೆಯಿಂದ ತಾವು ಇಚ್ಛಿಸುವ ಎಷ್ಟು ಸಂಖ್ಯೆಯಲ್ಲಿ ಬೇಕಾದರೂ ಶಾಲೆಗಳ ವಿವರಗಳನ್ನು ಆದ್ಯತೆ ಮೇಲೆ ನಮೂದಿಸತಕ್ಕದ್ದು. ಆನ್‌ಲೈನ್‌ನಲ್ಲಿ ಅಭ್ಯರ್ಥಿಗಳು ತಮ್ಮ ಇಚ್ಛೆ (Option) ಗಳನ್ನು ನಮೂದಿಸಲು ದಿನಾಂಕ: **06.10.2022** ರಿಂದ **12.10.2022ರವರೆಗೆ** ಅವಕಾಶ ನೀಡಲಾಗಿದೆ.

3) ಮೊದಲನೇ ಸುತ್ತಿನ ಸೀಟುಗಳ ಪ್ರಕಟಣೆಗಿಂತ ಮುಂಚೆ, ದಿನಾಂಕ **14.10.2022** ರಂದು ಅಣಕು ಸೀಟುಗಳ ಹಂಚಿಕೆ ಮಾಡಲಾಗುವುದು, ಆದರೆ ಇದು ಅಂತಿಮ ಹಂಚಿಕೆಯಾಗಿರುವುದಿಲ್ಲ. ಅಣಕು ಹಂಚಿಕೆಯ ನಂತರವೂ ಅಭ್ಯರ್ಥಿಗಳು ಇಚ್ಛಿಸಿದಲ್ಲಿ ದಿನಾಂಕ **15.10.2022 ಮತ್ತು 16.10.2022 ರವರೆಗೆ** ತಾವು ನಮೂದಿಸಿರುವ ಶಾಲೆಗಳನ್ನು ಬದಲಾವಣೆ ಮಾಡಿ ಮತ್ತೊಮ್ಮೆ ಆನ್‌ಲೈನ್‌ನಲ್ಲಿ ನಮೂದಿಸಲು ಅವಕಾಶವಿರುತ್ತದೆ.

4) ಅಭ್ಯರ್ಥಿಗಳು ನಮೂದಿಸುವ ಅಂತಿಮ ಇಚ್ಛೆಗಳ ಆದಾರದ ಮೇಲೆ ದಿನಾಂಕ **18.10.2022** ರಂದು ಶಾಲೆಗಳಿಗೆ ಹಂಚಿಕೆ ಮಾಡಲಾಗುವುದು. ಅಭ್ಯರ್ಥಿಗಳು ತಮಗೆ ಹಂಚಿಕೆಯಾದ ಶಾಲೆಗಳಿಗೆ ದಿನಾಂಕ **21.10.2022** ರೊಳಗೆ ವರದಿ ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ವರದಿ ಮಾಡಿಕೊಳ್ಳದ ಸೀಟುಗಳನ್ನು ರದ್ದುಗೊಳಿಸಲಾಗುವುದು ಹಾಗೂ ಅಭ್ಯರ್ಥಿಯನ್ನು 2ನೇ ಸುತ್ತಿನ ಕೌನ್ಸಿಲಿಂಗ್‌ಗೆ ಪರಿಗಣಿಸಲಾಗುವುದು.

5) ಮೀಸಲಾತಿ ಅಡಿಯಲ್ಲಿ ಸೀಟು ಪಡೆದ ಅಭ್ಯರ್ಥಿಗಳು ತಮ್ಮ ಮೂಲ ಜಾತಿ/ಆದಾಯ ಪ್ರಮಾಣ ಪತ್ರವನ್ನು ಪ್ರವೇಶ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸಬೇಕು.

6) ಹೈದರಾಬಾದ್ ಕರ್ನಾಟಕ ವರ್ಗದಡಿಯಲ್ಲಿ ಸೀಟು ಪಡೆದ ಅಭ್ಯರ್ಥಿಗಳು 371(ಜೆ) ಅಡಿಯಲ್ಲಿನ ಅರ್ಹತಾ ಪ್ರಮಾಣ ಪತ್ರ ಸಕ್ಷಮ ಪ್ರಾಧಿಕಾರದಿಂದ ಪಡೆದಿರಬೇಕು ಹಾಗೂ ಸದರಿ ಪ್ರಮಾಣ ಪತ್ರವನ್ನು ಪ್ರವೇಶ ಸಮಯದಲ್ಲಿ ಹಾಜರುಪಡಿಸಬೇಕು.

ಮುಂದುವರೆದಿದೆ.....

7) ಅಭ್ಯರ್ಥಿಗಳು/ಪೋಷಕರು ತಮ್ಮ ಅರ್ಜಿಯಲ್ಲಿ ಸಲ್ಲಿಸಿರುವ ಮಾಹಿತಿಗಳು/ದಾಖಲೆಗಳು ಸುಳ್ಳು/ನಕಲಿ ಎಂದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ಸೀಟುಗಳನ್ನು ಕೋರ್ಸ್‌ನ ಅವಧಿಯ ಯಾವುದೇ ಸಂದರ್ಭದಲ್ಲಿ ರದ್ದುಪಡಿಸಲಾಗುವುದು ಹಾಗೂ ಮಂಡಳಿಯ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

8) ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಹಾಗೂ ಮಂಡಳಿಯು ಹೊರಡಿಸುವ ಸುತ್ತೋಲೆಗಳನ್ನು ವೀಕ್ಷಿಸಲು www.ksdneb.org ಜಾಲತಾಣದಲ್ಲಿ ಅಂತಿಮ ಸುತ್ತಿನ ಕೌನ್ಸಿಲಿಂಗ್ ಮುಗಿಯುವವರೆಗೆ ಸಂಪರ್ಕಿಸಲು ಸೂಚಿಸಿದೆ.

ವಿಶೇಷಾಧಿಕಾರಿಗಳು
ಕರ್ನಾಟಕ ಶುಶ್ರೂಷ ಮತ್ತು ಅರೆ ವೈದ್ಯಕೀಯ
(ನಿಯಂತ್ರಣ) ಪ್ರಾಧಿಕಾರ, ಬೆಂಗಳೂರು.